2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು

ಓ.ಎಸ್.ನಂ.697/2019

ದಿನಾಂಕಃ 21-03-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಡಿ.ಡಬ್ಲ್ಯುಃ1

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ, ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

2 ಆನ್ ಡಿಮ್ಯಾಂಡ್ ಪ್ರಾಮಿಸರಿ ನೋಟನ್ನು ಹಾಜರುಪಡಿಸಿದ್ದು ಅವುಗಳಿಗೆ ಶ್ರಿ ಬಿ ಆರ್ ವಕೀಲರು ತಕರಾರು ಸಲ್ಲಿಸಿರುತ್ತಾರೆ. ಸದರಿ ದಾಖಲೆಗಳು 1 ನೇ ಪ್ರತಿವಾದಿಯ ಸ್ವಾಧೀನಕ್ಕೆ ಬರಲು ಅವಕಾಶ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಶ್ರೀ ಬಿ ಆರ್ ವಕೀಲರ ತಕರಾರಿಗೆ ಒಳಪಟ್ಟು ನಿಡಿ-1 ಮತ್ತು ನಿಡಿ-2 ಎಂದು ಗುರುತಿಸಲಾಯಿತು. ನೋಟೀಸು ನಿಡಿ-3, ಅಂಚೆ ಲಕೋಟೆ ನಿಡಿ-4, ನೋಟೀಸು ನಿಡಿ-5 ಅಂಚೆ ಲಕೋಟೆ ನಿಡಿ-6 ರಿಂದ ನಿಡಿ-8, statement of account ನಿಡಿ-9, ರಶೀದಿ ನಿಡಿ-10,

**ಪಾಟೀಸವಾಲು ಶ್ರೀ ಬಿ ಆರ್ ವಕೀಲರಿಂದಃ**

ನಿಡಿ-1 ನ್ನು ನನ್ನ ತಂದೆ ಜಗದೀಶ್ ರವರಿಗೆ ಬರೆದುಕೊಟ್ಟಿರುತ್ತಾರೆ. ಜಗದೀಶ್ ರವರು ಬಂಡಿ ಕೊಪ್ಪಲಿನವರು. ಆತ ನನ್ನ ಹೆಂಡತಿಯ ಅಣ್ಣ. ನಿಡಿ-1 ಸಾಲ ಪಡೆದ ಪತ್ರವಾಗಿದ್ದು, ನಮ್ಮ ಬಳಿ ಮತ್ತು ಜಗದೀಶ್ ರವರ ಬಳಿ ತಲಾ ಒಂದು ಪ್ರತಿ ಇದೆ, ಆದ್ದರಿಂದ ನಿಡಿ-1 ನನ್ನ ಬಳಿ ಇದೆ. ನಿಡಿ-2 ನಂಜುಂಡಪ್ಪ ರವರಿಗೆ ಬರೆದುಕೊಟ್ಟ ಪತ್ರವಾಗಿರುತ್ತದೆ. ನಂಜುಂಡಪ್ಪ ರವರು ಬಂಡಿ ಕೊಪ್ಪಲಿನವರು. ನಂಜುಂಡಪ್ಪ ನಮ್ಮ ಸಂಬಂಧಿಕರಲ್ಲ. ನಂಜುಂಡಪ್ಪ ಜಗದೀಶ್ ರವರ ಸಂಬಂಧಿಕರು ಎಂದರೆ ಸರಿಯಲ್ಲ. ನಿಡಿ-2 ಅನ್ನು ನಾನು ಇತ್ತೀಚೆಗೆ ನಂಜುಂಡಪ್ಪ ರವರಿಂದ ಪಡೆದುಕೊಂಡಿರುತ್ತೇನೆ. ನಿಡಿ-2 ರ ಸಾಲವನ್ನು ತೀರಿಸಿರುವುದಿಲ್ಲ, ಆದ್ದರಿಂದ ನಂಜುಂಡಪ್ಪರವರು ಅದರ ಸಾಲ ತೀರಿಸಿ ಎಂದು ತಿಳಿಸಿ ಅದನ್ನು ನನಗೆ ನೀಡಿರುತ್ತಾರೆ. ಸಾಲವನ್ನು ತೀರಿಸದೇ ಯಾವುದೇ ಒಬ್ಬ ವ್ಯಕ್ತಿ ಆನ್ ಡಿಮ್ಯಾಂಡ್ ಪ್ರಾಮಿಸರಿ ನೋಟನ್ನು ವಾಪಸ್ಸು ನೀಡುವುದಿಲ್ಲ. ನಂಜುಂಡಪ್ಪ ರವರು ನನಗೆ ದುಡ್ಡು ಬೇಕು ಎಂದು ನಿಡಿ-2 ಅನ್ನು ನೀಡಿರುತ್ತಾರೆ. ನಿಡಿ-2 ಅನ್ನು ನನ್ನ ತಂದೆ ಮನೆಗೆ ತಂದು ಇಟ್ಟಿದ್ದರು. ನಿಡಿ-1 ಮತ್ತು 2 ಅನ್ನು ನಾನೆ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ನಿಡಿ-3 ರಿಂದ 8 ರ ವರೆಗಿನ ನೋಟೀಸಿಗೆ ನಾನು ಪ್ರತ್ಯುತ್ತರವನ್ನು ನೀಡಿರುತ್ತೇನೆ. ಸದರಿ ಪ್ರತ್ಯುತ್ತರ ಹಾಜರುಪಡಿಸಿರುವುದಿಲ್ಲ. ನಿಡಿ-3 ರಿಂದ 8 ಅನ್ನು ನಾನೇ ವಕೀಲರ ಮುಖಾಂತರ ಕೊಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ನೋಟೀಸ್ ಗೆ ವಾದಿ ಪ್ರತ್ಯುತ್ತರ ನೀಡಿದ ಬಗ್ಗೆ ನನಗೆ ತಿಳಿದಿರುವುದಿಲ್ಲ. ನಿಡಿ-10 ತಂದೆಯಾದ ರಾಜಪ್ಪ ರವರ ಹೆಸರಿನಲ್ಲಿ ನೀಡಿರುವ ದಾಖಲೆ. ನಿಡಿ-10 ಕ್ಕೆ ಸಹಿ ಇಲ್ಲ ಎಂದರೆ ಸರಿಯಲ್ಲ.ನಿಡಿ-10 ಕಳೆದ 2 ವರ್ಷದ ಹಿಂದಿನ ದಾಖಲೆ. ನಿಡಿ-9 ವಾದಿಯು ATM ನಿಂದ ಹಣ ಪಡೆದ ದಾಖಲೆ. ನಿಡಿ-9 ರಲ್ಲಿ ವಾದಿಯೇ ಹಣ ಡ್ರಾ ಮಾಡಿರುವ ಬಗ್ಗೆ ನಮೂದು ಇರುವುದಿಲ್ಲ.

ಸಾಕ್ಷಿ ಮುಂದುವರೆದು ನನ್ನ ತಂದೆ ATM ಅನ್ನು ವಾದಿ ಪಡೆದು ಬೆಂಗಳೂರಿನಲ್ಲಿ ಹಣ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-9 ರಲ್ಲಿ ಬೆಂಗಳೂರಿನಲ್ಲಿ ಡ್ರಾ ಮಾಡಲಾಗಿದೆ ಎಂದು ನಮೂದು ಇರುವುದಿಲ್ಲ. ನಾನೇ ಹಣವನ್ನು ಡ್ರಾ ಮಾಡಿ ವಾದಿಯ ವಿರುದ್ದ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ವಾದಿ ಯಾವುದೇ ಹಣವನ್ನು ಡ್ರಾ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ರಾಜಪ್ಪ ಜಮೀನನ್ನು ಅಭಿವೃದ್ದಿ ಪಡಿಸಿ ಬೋರ್ ವೆಲ್ ಹಾಕಿಸಿದರು ಎಂದರೆ ಸರಿಯಲ್ಲ. ನನ್ನ ತಂದೆ ಜೀವಿತ ಕಾಲದಲ್ಲಿ ತೋಟ ಮಾಡಿದ್ದರು ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳು ಮೊದಲಿನಿಂದಲು ತೆಂಗಿನ ತೋಟ ಎಂದರೆ ಸರಿಯಲ್ಲ. ನನ್ನ ತಂದೆ ತನ್ನನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಎಂದು ನನ್ನ ವಿರುದ್ದ ಪಂಚನಹಳ್ಳಿ ಠಾಣೆಗೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯನ್ನು ನಾನು ಹೊರಹಾಕಿದ್ದೆ ಆದ್ದರಿಂದ ಅವರು ದಾವೆಯನ್ನು ಹೂಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಪ್ರಸ್ತುತ ದಾವೆಯನ್ನು ನನ್ನ ಹಾಗೂ ಹೆಣ್ಣು ಮಕ್ಕಳ ಮೇಲೆ ಹೂಡಿರುತ್ತಾರೆ. ಹೆಣ್ಣು ಮಕ್ಕಳೇ ನನ್ನ ತಂದೆಯನ್ನು ನೋಡಿಕೊಂಡರು ಎಂದರೆ ಸರಿಯಲ್ಲ. ಹೆಣ್ಣು ಮಕ್ಕಳೇ ತಂದೆಯ ಶವಸಂಸ್ಕಾರ ಮಾಡಿದ್ದಾರೆ ಎಂದರೆ ಸರಿಯಲ್ಲ. ಶವಸಂಸ್ಕಾರ ಆದ ದಿನ ನಾನು ಹೆಣ್ಣು ಮಕ್ಕಳಿಗೆ ಹಲ್ಲೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ದೂರು ದಾಖಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 3 ದಿನದ ನಂತರ ಗಲಾಟೆಯಾಗಿತ್ತು ಎಂದು ನುಡಿಯುತ್ತಾರೆ. ಪಂಚನಹಳ್ಳಿ ಪೊಲೀಸರು ಹಿಂಬರಹ ನೀಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತುಗಳು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅದು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಹಾಗೂ ಅದನ್ನು ನನ್ನ ತಂದೆ ನನ್ನ ಮಗಳಿಗೆ ವಿಲ್ ಬರೆದಿದ್ದಾರೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತನ್ನು ನನ್ನ ತಂದೆ 20 ವರ್ಷದ ಹಿಂದೆ ಕ್ರಯಕ್ಕೆ ಪಡೆದಿರುತ್ತಾರೆ. ಆದರೆ ಯಾರಿಂದ ಕ್ರಯಕ್ಕೆ ಪಡೆದಿದ್ದಾರೆಂದು ತಿಳಿದಿರುವುದಿಲ್ಲ. ನನ್ನ ತಂದೆಗೆ ಕೃಷಿ ಬಿಟ್ಟರೆ ಬೇರೆ ಆದಾಯ ಇರುವುದಿಲ್ಲ. ನನ್ನ ತಂದೆ ಕ್ರಯಕ್ಕೆ ಪಡೆದ ಬಗ್ಗೆ ಕ್ರಯಪತ್ರ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿ ಪತ್ರವನ್ನು ಸಲ್ಲಿಸುವಾಗ ವಕೀಲರಿಗೆ ವಿಲ್ ಆಗಿರುವ ಬಗ್ಗೆ ತಿಳಿಸಿರುತ್ತೇನೆ. ವಿಲ್ಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಿಭಾಗ ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ವಿಲ್ ಆಗಿದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಯಾವುದೇ ವಿಲ್ಲನ್ನು ಮಾಡಿಲ್ಲ ಹಾಗೂ ಅವರಿಗೆ ವಿಲ್ ಮಾಡಲು ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ವಿಲ್ಲನ್ನು ಬರೆದಿದ್ದರೆ ನನ್ನ ತಂದೆ ದಾವೆಯನ್ನು ದಾಖಲಿಸುತಿರಲಿಲ್ಲ ಎಂದರೆ ಸರಿಯಲ್ಲ. ಹೆಣ್ಣು ಮಕ್ಕಳಿಗೆ ವಿಭಾಗ ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

2 ನೇ.ಹೆ.ಪ್ರ:ದ:ನ್ಯಾ:ದಂ.,ರವರು,

ಕಡೂರು.